**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 23.08.2024.**

**ಪಾಟೀ ಸವಾಲು : ಶ್ರೀ ವಿಜಿಎನ್ ವಾದಿ ಪರ ವಕೀಲರಿಂದಃ**

ಆದೆಪ್ಪ ರವರು ತಿಪ್ಪಮ್ಮ ಮತ್ತು ಪ್ರಕಾಶ್ ರವರ ಮೇಲೆ ದಾವೆ ಸಲ್ಲಿಸಿದ್ದಾರೆ. ವಾದಿಯವರು ವರವಣಿ ಗ್ರಾಮದ ಸ.ನಂ. 219/1 ಸಂಬಂಧ ದಾವೆ ಸಲ್ಲಿಸಿದ್ದಾರೆ. ಸಾಕ್ಷಿಯು ಸ್ವತಃ ವಾದಿಗಳು ಜಮೀನು ನಮ್ಮದು ಎಂದು ದಾವೆಯನ್ನು ಸಲ್ಲಿಸಿದ್ದಾರೆ. ನಾನು ವರವಣಿ ಮತ್ತು ಹೊನ್ನಪ್ಪನಹಳ್ಳಿ ಗ್ರಾಮದಲ್ಲಿ ವಾಸವಿಲ್ಲ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ತಿಳಿದುಕೊಂಡಿದ್ದೇನೆ..

ದಾವಾ ಸ್ವತ್ತಿನ ಸ.ನಂ. 219/1 ವಿಸ್ತೀರ್ಣ 4 ಎಕರೆ 17 ಗುಂಟೆ ಇದೆ. ನನಗೆ ಓದಲು ಬರೆಯಲು ಬರುತ್ತದೆ. ಈ ಹಂತದಲ್ಲಿ ಸಾಕ್ಷಿಗೆ ನಿಪಿ-5 ರಿಂದ 11 ರ ಪಹಣಿ ಪ್ರತಿಗಳ ಕಾಲಂ. 12 ಅನ್ನು ತೋರಿಸಿದ್ದು, ಸಾಕ್ಷಿಯು ಸದರಿ ಪಹಣಿಗಳನ್ನು ಓದಿ ಕಾಲಂ. 12 ರಲ್ಲಿ ಆದೆಪ್ಪ ಬಿನ್ ಆದೆಪ್ಪ ಎಂದು ಇದೆ ಎಂದು ನುಡಿಯುತ್ತಾರೆ. ಸದರಿ ಆದೆಪ್ಪ ಬಿನ್ ಆದೆಪ್ಪ ರವರು ವಾದಿಗಳ ತಾತ ಎಂದರೆ ಸರಿ. ಸಾಕ್ಷಿಯು ಸ್ವತಃ ಆದೆಪ್ಪ ಬಿನ್ ಆದೆಪ್ಪ ರವರನ್ನು ಪುಟ್ಟಪ್ಪ @ ಆದೆಪ್ಪ ಎಂದು ಕರೆಯುತ್ತಾರೆ ಎಂದು ನುಡಿಯುತ್ತಾರೆ. ಪುಟ್ಟಪ್ಪ ರವರಿಗೆ ಆದೆಪ್ಪ ಎಂದು ಕರೆಯುತ್ತಿದ್ದ ಬಗ್ಗೆ ನಾನು ಯಾವುದೇ ದಾಖಲೆಗಳಲ್ಲಿ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

ಕಂದಾಯ ದಾಖಲೆಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿರುವ ಬಗ್ಗೆ ಪಹಣಿ ನೋಡಿದ್ದೇನೆ. ಪಹಣಿ ಹೊರತುಪಡಿಸಿ ಬೇರೆ ದಾಖಲೆಯನ್ನು ನೋಡಿರುವುದಿಲ್ಲ. ಯಾವ ದಿನಾಂಕದಂದು

ತಿಪ್ಪಮ್ಮ ರವರ ಮಾವನಾದ ವೆಂಕಟಶಾಮಪ್ಪ ರವರು ಪುಟ್ಟಪ್ಪ @ ಆದೆಪ್ಪ ಮತ್ತು ಅವರ ಮಗ ನಾರಾಯಣಪ್ಪ ರವರಿಂದ ಕ್ರಯಕ್ಕೆ ಪಡೆದಿರುವ ಬಗ್ಗೆ ನನಗೆ ಗೊತ್ತಿಲ್ಲ ಸಾಕ್ಷಿಯು ಸ್ವತಃ ವರ್ಷ ಮಾತ್ರ ಗೊತ್ತು ಎಂದು ನುಡಿಯುತ್ತಾರೆ ನಾನು ಸದರಿ ಕ್ರಯ ಪತ್ರಕ್ಕೆ ಸಾಕ್ಷಿದಾರನಲ್ಲ . ನಾನು ದಾವಾ ಸ್ವತ್ತಿಗೆ ಬಾಜೂದಾರನಲ್ಲ. ಪ್ರತಿವಾದಿಗೆ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಮತ್ತು ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ ವಾದಿಗಳು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ತಿಪ್ಪಮ್ಮ ರವರ ಮಕ್ಕಳು ಸ್ವಾಧೀನದಲ್ಲಿದ್ದು, ಅವರು ಮಂಚೇನಹಳ್ಳಿಯ ಬರೋಡಾ ಬ್ಯಾಂಕಿನಲ್ಲಿ ಸದರಿ ಸ್ವತ್ತಿನ ಮೇಲೆ ಸಾಲ ಪಡೆದಿದ್ದಾರೆ ಎಂದು ನುಡಿಯುತ್ತಾರೆ. ನಾನು ಸಾಲದ ದಾಖಲೆಗಳನ್ನು ನೋಡಿಲ್ಲ. ಪ್ರತಿವಾದಿಗಳು ಸಾಲ ಪಡೆಯಲು ಹಕ್ಕು ಹೊಂದಿಲ್ಲ ಮತ್ತು ಅವರು ಸಾಲ ಪಡೆದಿಲ್ಲ, ವಾದಿಗಳೇ ಅವರ ಮುತ್ತಾತನ ಕಾಲದಿಂದ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ನಾನು ಎಂದಿಗೂ ವರವಣೆ ಹಾಗೂ ಹೊನ್ನಪ್ಪನ ಹಳ್ಳಿ ಗ್ರಾಮದ ವಾಸಿಯಲ್ಲ ಹಾಗೂ ದಾವಾ ಸ್ವತ್ತಿನ ಬಾಜೂದಾರನಲ್ಲ ಆದರೂ ಸಹಾ ಪ್ರತಿವಾದಿಗೆ ಅನುಕೂಲವಾಗಲು ಹಾಗೂ ಅವರ ಮೇಲಿನ ವಿಶ್ವಾಸದಿಂದ ಸುಳ್ಳು ಸಾಕ್ಷ್ಯವನ್ನು ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಗೌರಿಬಿದನೂರು.